# ಶ್ರೀಪಾದರಾಜ ವಿರಚಿತ – ಕೆಲವು ಸುಳಾದಿಗಳು

ರಾಗ : ನಾಟಿ ತಾಳ –ಧ್ರುವ

ಅನ್ನಂತ ಕಾಲದಲ್ಲಿ ನಿನ್ನ ನಾನರಿಯದೆ ಭವಗಳಲ್ಲಿ ಬಂದೆನೋ
ಅನ್ನಂತ ಕಾಲದಲ್ಲಿ ನಿನ್ನವನೆನಿಸದೆ ಮೂರುಖನಾದೆನೋ
ಅನ್ನಂತ ಕಾಲದಲ್ಲಿ ನಿನ್ನ ಚರಣಗತಿಯಿಲ್ಲದೆ ನೊಂದೆನೊ
ಅನ್ನಂತ ಕಾಲದಲ್ಲಿ ಅದಾವ ಪುಣ್ಯದಿಂದ ಬಂದು ಇಂದು
ನಿನ್ನವನೆನಿಸದೆ ಅದಾವ ಪುಣ್ಯದಿಂದಲೆನ್ನ ಮನ
ನಿನ್ನಲ್ಲೆರಗಿತೊ ನೋಯದಂತೆ
ಎನ್ನ ಪೊರೆದು ಪಾಲಿಸೊ ದೀನನಾಥ ಶ್ರೀರಂಗವಿಠಲ ।

ರಾಗ : ಸಾರಂಗ ತಾಳ – ಧ್ರುವತಾಳ

ನಿನ್ನಾಧೀನ ಶರೀರ ಕರಣ ಚೇಷ್ಟೆಗಳೆಲ್ಲ
ನಿನಾಧೀನ ಬಂಧ ಮೋಕ್ಷ ನಿರಯಗಳು
ನಿನ್ನಾಧೀನ ಯೋಗ್ಯತೆ ಸಾಧನ ಸಾಧ್ಯಗಳೆಲ್ಲ
ನಿನ್ನಾಧೀನ ಸುಕೃತ ದುಷ್ಕ್ರುತ ಫಲವು
ನಿನ್ನಾಧೀನ ಚರಾಚರವೆಂದು ಶ್ರುತಿ ಸಾರುತಲಿವೆ
ಇಂತು ಪುಣ್ಯ ಪಾಪವೆಲ್ಲ ನಿನ್ನ ಲೇಪಿಸವೋ ದೇವ
ಎಂತು ಜೀವರನು ಪುಣ್ಯ ಪಾಪಂಗಳನುಣಿಸುವೆ
ಅಂತರಾತ್ಮನೆ ನಿನ್ನ ಮಹಿಮೆಗೆ ನಮೋ ಎಂಬೆ
ಎಂತೋ ಚಿತ್ತವಿನ್ನೆಂತೋ ಪಾಲಿಸೋ ರಂಗವಿಠಲ ।

ತಾಳ – ತ್ರಿಪುಟತಾಳ
ತೊಳಲಿ ಸಂಸಾರ ಚಕ್ರದಲಿ
ಬಳಲಿದ ಜೀವಗಣಕೆ ಸಂತಸ
ನಳಿನನಾಭಾ ನಿನ್ನ ಪದಾಂಭೋಜ
ನೆಳಲುನೆಮ್ಮಗೆಯಲ್ಲವೆ
ಒಳವೆ ಜಗದೊಳು ಸಕಲ ಸುಖಂಗಳು
ಕಳವಳಿಸುವರು ರಂಗವಿಠಲ

ತಾಳ – ರೂಪಕತಾಳ

ನೀ ಕರುನಿಯೆಂದು ನಿನ್ನ ನಾ ಮರೆಹೊಕ್ಕೆ
ನಿರಾಕರಿಸದೆ ಎನ್ನ ಶ್ರೀಕಾಂತ ಕಾಯಯ್ಯ
ನಿನ್ನವನೆಂಬೆ ನಾನು ಮತ್ತನ್ಯವರಿಯೆನು
ನಿನ್ನವನೆಂಬೆ ನಾನು
ಕಂದರ್ಪನೆಂದೆಂದು ಕಾಡದಂತೆ ಮಾಡೊ
ವೃಂದಾರಕಾಧೀಶ ರಂಗವಿಠಲ ।

ತಾಳ – ಅಟ್ಟತಾಳ
ಎನ್ನ ಮನ ಹರಿ ನಿನ್ನ ಚರಣದೊಳೊಮ್ಮೆ
ಎರಗದು ದುರಿತ ದುಷ್ಕೃತವೆಂತು ಸ್ಥೈರಿಪೆನೊ
ನಂದನಂದನ ಮುಕುಂದ ಎಂತು ಸ್ಥೈರಿಪೆನೊ
ಮಂದಹಾಸ ಗೋವಿಂದ ಎಂತು ಸ್ಥೈರಿಪೆನೊ
ಎನ್ನ ಮನವನು ನಿನ್ನ ಚರಣದೊಳೊಮ್ಮೆ
ಎರಗಿಸೊ ರಂಗವಿಠಲ ಎಂತು ಸ್ಥೈರಿಪೆನೊ ।

ತ್ರಿಪುಟತಾಳ

ವ್ರತ ಜಪತಪ ಯಾಗಂಗಳ ಮಾಡುವೆನೆಂದು
ಮನೆಮನೆದಪ್ಪದೆ ತಿರುಗಿ ಬಳಲಿದೆ
ಬೆಲೆಗೆ ಹೋಗದು ಸರಕು ಸಡಿಲದಯ್ಯ ಹರಿಯೆ
ಕೊಂಬುವರಿಲ್ಲ ಬೆಲೆಗೆ ಹೋಗದು ಸರಕು
ಸಡಿಲುವಂತೆ ಮರೆಗೆ ತೆಗೆದು ನಿನ್ನ
ಚರಣವಡಿಯಲಿಟ್ಟು ಕಾಯೊ ರಂಗವಿಠಲ ।

ತಾಳ – ಏಕತಾಳ

ಭವವೆಂಬಟವಿಯಲ್ಲಿ ಭಯಕೊಳದಲ್ಲಿ ಸಿಕ್ಕಿ
ತಾಪತ್ರಯವೆಂಬ ದಾವಾನಲ ತಪ್ತ ನರರಿಗೆ
ಹರಿ ನಿನ್ನ ನಾಮಾಶ್ರಯವಲ್ಲದೆ ಮತ್ತುಂಟೆ
ಯಮಲೋಕದಲ್ಲುಂಟೆ ತನುಪರಿಣ ವಲ್ಲಭ
ಅಮೃತ ವಸರುವ ಪದಪದುಮದ
ನೆಳಲ ನೆಲೆಮನೆಯಲಿ ಎನ್ನನಿರಿಸೊ ರಂಗವಿಠಲ

ತಾಳ – ಮಠ್ಯತಾಳ

ಅನ್ನಕ ಭಯದ್ರವಿಣ ದೇಹನಿಮಿತ್ತ
ಅನ್ನಕ ಶೋಕಾಶಯ ಮಾರಿ
ಅನ್ನಕ ಲೋಭ ಅಶುಭದ ಲಾಭ
ಅನ್ನಕ ನನ್ನದು ನಾನೆಂಬಹಮ್ಮಿಕೆ
ಅವನ್ನಕ ನಿನ್ನ ಚರಣರತಿ ದೊರಕೊಳ್ಳದೊ
ಉನ್ನಂತ ಗುಣಪರಿಪೂರ್ಣ ರಂಗವಿಠಲ ।